not to be printed

2nd Cover

# ನೀನಾಸಮ್ ಸಂಸ್ಕೃತಿ ಶಿಬಿರ
# ಅಕ್ಟೋಬರ್ ೨೦೦೭

೧೯೭೭ರಿಂದ ಇಲ್ಲಿಯವರೆಗೆ, ನೀನಾಸಮ್ ಸಂಸ್ಥೆಯು ಸತತವಾಗಿ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ ಮತ್ತು ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಹೊಸ ಶತಮಾನದ ಹೊಸ ಪರಿಭಾಷೆಗಳು: ಬೌದ್ಧಿಕ ಸಿದ್ಧಮಾದರಿಗಳ ವಿಮರ್ಶೆ' ಎಂಬ ವಿಷಯ ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ. ಇವತ್ತಿನ ನಮ್ಮ ಜಗತ್ತಿನಲ್ಲಿ 'ವಾಸ್ತವ'ವೆಂಬುದು ತುಂಬ ಕ್ಷಿಪ್ರಗತಿಯಲ್ಲಿ ಬದಲಾಗುತ್ತಿದ್ದರೂ ಅಂಥ ವಾಸ್ತವವನ್ನು ಗ್ರಹಿಸುವ ಮತ್ತು ವಿಶ್ಲೇಷಿಸುವ ವಿಧಾನಗಳೂ ಮತ್ತು ವಿವರಿಸುವ ಪರಿಭಾಷೆಗಳೂ ಹಲವೊಮ್ಮೆ ಬದಲಾಗದೆ ಉಳಿದಿವೆ. ಇಂಥ ಪರಿಭಾಷಾ ಪರಿಷ್ಕರಣೆಯ ಪ್ರಯತ್ನವನ್ನು ಬೌದ್ಧಿಕ ಚಿಂತನೆಗಳ ಕುರಿತು ಮತ್ತು ಕಲಾವಿಮರ್ಶೆಯ ಕುರಿತು ನಡೆಸುವುದು ಪ್ರಸ್ತುತ ಶಿಬಿರದ ಉದ್ದೇಶವಾಗಿದೆ.

ಈ ವಿಷಯಗಳಿಗೆ ಸಂಬಂಧಿಸಿದಂತೆ, ಹಲವು ಉಪನ್ಯಾಸ ಮತ್ತು ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಡಾ. ಆಶೀಶ್ ನಂದಿ, ಡಾ. ವಿನಯ ಲಾಲ್, ಶ್ರೀ ಸಮೀಕ್ ಬಂದೋಪಾಧ್ಯಾಯ, ಡಾ. ಶಿವ ವಿಶ್ವನಾಥನ್, ಶ್ರೀ ಮನು ಚಕ್ರವರ್ತಿ, ಡಾ. ರಾಜೇಂದ್ರ ಚೆನ್ನಿ, ಶ್ರೀ ಜಿ. ರಾಜಶೇಖರ ಮೊದಲಾದ ಗಣ್ಯರು ಈ ಉಪನ್ಯಾಸ-ಸಂವಾದಗಳನ್ನು ನಡೆಸಲಿದ್ದಾರೆ.

ಇದರ ಮುಂದುವರಿಕೆಯಾಗಿ, ಕಲೆ ಮತ್ತು ಸಮಾಜದ ವಿಭಿನ್ನ ಸ್ತರಗಳಲ್ಲಿ ವ್ಯಕ್ತವಾಗುತ್ತಿರುವ ಬೌದ್ಧಿಕ ಸಿದ್ಧಮಾದರಿಗಳ ಸಮಸ್ಯೆ ಮತ್ತು ಹೊಸ ಮಾದರಿಗಳ ಆವಿಷ್ಕಾರ ಕುರಿತು ನಡೆಯಲಿರುವ ಚರ್ಚೆಗಳಲ್ಲಿ – ಶ್ರೀ ಸುಂದರ ಸಾರುಕ್ಕೈ, ಶ್ರೀ ರಾಘವೇಂದ್ರ ಗದಗಕರ್, ಡಾ. ಶ್ರೀಕಾಂತ ಶಾಸ್ತ್ರಿ, ಶ್ರೀಮತಿ ಸುದೇಷ್ಣಾ ಬ್ಯಾನರ್ಜಿ, ಶ್ರೀ ಮುಕುಂದ ರಾವ್, ಶ್ರೀ ಕಿ.ರಂ. ನಾಗರಾಜ್, ಶ್ರೀ ವಿವೇಕ ಶಾನಭಾಗ, ಶ್ರೀ ಸುರೇಶ್ ಜಯರಾಂ, ಶ್ರೀ ಸಿರಾಜ್ ಅಹಮದ್, ಶ್ರೀ ವಸುಧೇಂದ್ರ, ಶ್ರೀ ಎಸ್. ಮಂಜುನಾಥ್, ಶ್ರೀಮತಿ ಸುನಂದಾ ಕಡಮೆ, ಶ್ರೀ ಎನ್.ಕೆ. ಹನುಮಂತಯ್ಯ, ಶ್ರೀಮತಿ ಸಂಧ್ಯಾದೇವಿ – ಮೊದಲಾದವರು ಪಾಲ್ಗೊಳ್ಳಲಿದ್ದಾರೆ.

ಜತೆಗೆ, ಪ್ರತಿ ಶಿಬಿರಗಳಲ್ಲೂ ನಡೆಯುವಂತೆ, ಕಲಾಸಹೃದಯತೆಗೆ ಸಂಬಂಧಿಸಿ ತಿರುಗಾಟ ನಾಟಕಗಳ ಚರ್ಚೆ-ವಿಶ್ಲೇಷಣೆಯೇ ಅಲ್ಲದೆ, ಕಾವ್ಯ-ಸಂಗೀತ-ಚಲನಚಿತ್ರ ರಸಗ್ರಹಣ ಕಾರ್ಯಕ್ರಮಗಳೂ ನಡೆಯಲಿವೆ.

ಜತೆಗೆ, ಈ ದಿನಗಳಲ್ಲಿ, ಪ್ರತಿ ಸಂಜೆ ನಡೆಯುವ ಸಂಸ್ಕೃತಿ ಉತ್ಸವದ ಕಾರ್ಯಕ್ರಮಗಳ ಪಟ್ಟಿ ಮತ್ತು ಪರಿಚಯ ಮುಂದಿನ ಪುಟಗಳಲ್ಲಿದೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed

3rd Cover

# NINASAM
# CULTURE COURSE 2007

The Culture Course has been one of Ninasam's major annual events for the last two decades. Held over 7 days every October, The Course is designed around a specific theme every year, and organised as a combination of special lectures on the theme, lecture-demonstration-discussions on fundamentals of appreciation of art forms like literature, theatre, film, music, dance, and so on -- all this during the day-sessions, and a series of cultural programmes in the evenings. The evening festival this year consists of the following programmes:

- **7th October, Sunday:** Ninasam Performance - ***Cherry Topu;*** Translation of Anton Chekov, Directed by Channakeshava
- **8th October, Monday:** Ninasam Tirugata Performance - ***Ee Naraka... Ee Pulaka...;*** Directed by Raghunandana
- **9th October, Tuesday:** Ninasam Tirugata Performance - ***Lokottame;*** Directed by Channakeshava
- **10th October, Wednesday:** Talamaddale performance ***Atikaaya Neeti***; Adishakti Performance - *The Hare and the Tortoise;* By Adishakti, Pondicherry
- **11th October, Thursday:** Hindustani Music Vocal Recital by **Pt. Ganapathi Bhat,** Hasanagi
- **12th October, Friday:** Karnatic Vocal Recital by **Rudrapatnam Brothers,** Bangalore
- **13th October, Saturday:** Dance Performance by **Nirupama-Rajendra,**

Ninasam, Heggodu, Sagara
Karnataka 577 417

not to be printed

Page 1

**ಅಕ್ಟೋಬರ್ ೭ ಭಾನುವಾರ**

photo to be printed here
see cd for the photo with this file no.

**07CC07**

ನೀನಾಸಮ್ ನಾಟಕ

## ಚೆರ್‍ರಿ ತೋಪು

ಆ್ಯಂಟನ್ ಚೆಕಾಫ್‌ನ 'ಚೆರ್‍ರಿ ಆರ್ಚರ್ಡ್' ನಾಟಕಾನುವಾದ

ಕನ್ನಡಕ್ಕೆ: ಅಕ್ಷರ ಕೆ.ವಿ.

**ವಿನ್ಯಾಸ ಮತ್ತು ನಿರ್ದೇಶನ: ಚನ್ನಕೇಶವ**

ಪ್ರಸಿದ್ಧ ರಷಿಯನ್ ನಾಟಕಕಾರ ಆ್ಯಂಟನ್ ಚೆಕಾಫ್‌ನ 'ಚೆರ್‍ರಿ ಆರ್ಚರ್ಡ್' ಆತನ ಸಾಹಿತ್ಯ ಜೀವನದ ಕಟ್ಟಕಡೆಯ ಒಂದು ಪಕ್ವ ಕೃತಿ ಮಾತ್ರವಲ್ಲ, ಅದು ಜಗತ್ತಿನ ನಾಟಕ ಸಾಹಿತ್ಯದಲ್ಲಿಯೇ ಮಹತ್ವದ ಮೈಲಿಗಲ್ಲೆಂದು ಪರಿಗಣಿತವಾಗಿರುವಂಥ ಒಂದು ನಾಟಕವೂ ಹೌದು.

ಒಂದು ರೀತಿಯಿಂದ, ಈ ನಾಟಕದ ಕಥೆಯು ಆ ಕಾಲದ ರಷಿಯಾದ – ಮತ್ತು ವಿಶಾಲವಾಗಿ ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಪಾಶ್ಚಿಮಾತ್ಯ ಜಗತ್ತಿನ – ಚರಿತ್ರೆಯ ಗತಿಯನ್ನೇ ನಿರೂಪಿಸುವಂಥದು; ಬಂಡವಾಳಶಾಹಿ ಯುಗದ ಆರಂಭದ ಲೋಕವೊಂದನ್ನು ಕಾಣಿಸುವಂಥದು. ಈ ನಾಟಕದಲ್ಲಿ, ಸಾಲಕ್ಕೆ ಆಧಾರವಾಗಿರುವ ಒಂದು ಜಮೀನ್ದಾರೀ ಕುಟುಂಬದ ಚೆರ್‍ರಿ ತೋಟ ಹರಾಜಿಗೆ ಬಂದಿದೆ. ಅದನ್ನು ನಿವೇಶನಗಳಾಗಿ ಮಾರ್ಪಡಿಸಿ ಮಾರುವ ಉಪಾಯವನ್ನು ಆ ತೋಟದೊಂದಿಗೆ ಭಾವನಾತ್ಮಕ ಸಂಬಂಧ ಇಟ್ಟುಕೊಂಡಿರುವ ಒಡತಿ ರೆನೆವಸ್ಕಾಯಾ ಒಪ್ಪುವುದಿಲ್ಲ. ಅತ್ತ, ಹರಾಜೂ ನಿಲ್ಲುವುದಿಲ್ಲ. ಆಗ, ಹಿಂದೆ ಆ ಮನೆಯಲ್ಲಿ ಒಕ್ಕಲಾಗಿದ್ದು ಈಗ ಹಣವಂತನಾಗಿರುವ ಲೋಪಾಹಿನ್ ತೋಟವನ್ನು ಕೊಳ್ಳುತ್ತಾನೆ. ಚೆರ್‍ರಿ ಮರಗಳನ್ನು ಕಡಿದು ಉರುಳಿಸುವ ಶಬ್ದದ ಹಿನ್ನೆಲೆಯಲ್ಲಿ ಈ ಕುಟುಂಬ ಮನೆ ಬಿಟ್ಟು ಹೊರಡುತ್ತದೆ.

ಹೆಗ್ಗೋಡು ಮತ್ತು ಸುತ್ತಮುತ್ತಲಿನ ಊರುಗಳ ನೀನಾಸಮ್ ಸಂಸ್ಥೆಯ ಸದಸ್ಯರು, ಕಳೆದ ಹಲವು ವರ್ಷಗಳಲ್ಲಿ ಮಾಡುತ್ತ ಬಂದಿರುವಂತೆಯೇ, ಈ ವರ್ಷವೂ ಕೂಡಿ ಪ್ರಸ್ತುತಪಡಿಸುತ್ತಿರುವ ನಾಟಕ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be printed

Page 2

**ಅಕ್ಟೋಬರ್ ೮ ಸೋಮವಾರ**

photo to be printed here
see cd for the photo with this file no.

**07CC08**

ತಿರುಗಾಟ ನಾಟಕ

## ಈ ನರಕ... ಈ ಪುಲಕ...

ಪಿ. ಲಂಕೇಶ್ ಅವರ ಏಳು ಏಕಾಂಕ ನಾಟಕಗಳ ಸಂಕಲನ

**ವಿನ್ಯಾಸ ಮತ್ತು ನಿರ್ದೇಶನ: ರಘುನಂದನ**

ಪ್ರಮುಖ ಕನ್ನಡ ಲೇಖಕ ಪಿ. ಲಂಕೇಶ್ ಅವರು ತಮ್ಮ ಹಲವಾರು ಕಥೆಕಾವ್ಯನಾಟಕಗಳೊಂದಿಗೆ ಸುಮಾರು ಮೂವತ್ತು ವರ್ಷಗಳ ಅವಧಿಯಲ್ಲಿ ಬರೆದ ಏಳು ಏಕಾಂಕಗಳಾದ 'ಟಿ. ಪ್ರಸನ್ನನ ಗೃಹಸ್ಥಾಶ್ರಮ', 'ನನ್ನ ತಂಗಿಗೊಂದು ಗಂಡು ಕೊಡಿ', 'ತೆರೆಗಳು', 'ಪೋಲೀಸರಿದ್ದಾರೆ ಎಚ್ಚರಿಕೆ!', 'ಸಿದ್ಧತೆ', 'ಗಿಳಿಯು ಪಂಜರದೊಳಿಲ್ಲ', 'ಕ್ರಾಂತಿ ಬಂತು, ಕ್ರಾಂತಿ!' ನಾಟಕಗಳನ್ನು ಹೆಣೆದು ಸಂಕಲಿಸಿದ ರೂಪ – 'ಈ ನರಕ... ಈ ಪುಲಕ...'.

ಈ ಏಳು ಏಕಾಂಕಗಳು ತಮ್ಮ ಕಥಾನಕಗಳಲ್ಲಿ ಬೇರೆಬೇರೆ ವಸ್ತು-ಸಂದರ್ಭಗಳನ್ನು ಮುಂದಿಟ್ಟುಕೊಂಡಿದ್ದರೂ ಆತ್ಯಂತಿಕವಾಗಿ ಇವು ಸಮಕಾಲೀನ ಮಧ್ಯಮವರ್ಗದ ಬದುಕು-ಸಂಕಟಗಳನ್ನು ಪ್ರತಿಬಿಂಬಿಸುವ ಉದ್ದಿಶ್ಯವನ್ನು ಕೇಂದ್ರವಾಗಿಟ್ಟುಕೊಂಡಂಥವು. ಮತ್ತು, ಆ ವರ್ಗದ ವಿಭಿನ್ನ ಬಗೆಯ ಪ್ರತಿನಿಧಿಗಳನ್ನು ಎದುರಿಗಿಟ್ಟುಕೊಂಡು ಅವರೆಲ್ಲರ ಆಶೆ-ಕನಸುಗಳ ಒಂದು ಸ್ಥಾಯೀ ಸೂತ್ರವನ್ನು ಕಟ್ಟುವುದು ಕೂಡ ಈ ಏಳುನಾಟಕಗಳ ಸಮಾನ ಗುರಿಯಾಗಿದೆ. ಅದನ್ನೇ ಪ್ರಸ್ತುತ ಪ್ರಯೋಗವು ಸೃಜನಾತ್ಮಕವಾದ ಸಂಕಲನದ ಮೂಲಕ ಒಂದು ರಂಗಪಠ್ಯವಾಗಿ ರೂಪಾಂತರಿಸಿದೆ.

ಮತ್ತು ಇಂಥ ಸಂಕಲಿತ ಪಠ್ಯರೂಪದ ಮೂಲಕ, ಇವತ್ತಿನ ಕಾಲಮಾನದ ವ್ಯಕ್ತಿ- ಕುಟುಂಬ-ಸಮಾಜ-ಜಗತ್ತುಗಳ ವಲಯಗಳಲ್ಲಿ ಬೆಳೆದು ಬಿಗಡಾಯಿಸುತ್ತಿರುವ ಹಲವುಹತ್ತು ಬಗೆಯ ಸಮಕಾಲೀನ ಇಕ್ಕಟ್ಟು ಮತ್ತು ಬಿಕ್ಕಟ್ಟುಗಳನ್ನು ಕುರಿತು ಧ್ಯಾನಿಸುವ ಕಡೆಗೆ ಕೂಡ ತಿರುಗಾಟದ ಈ ಪ್ರಸ್ತುತ ಪ್ರಯೋಗವು ಉದ್ಯುಕ್ತವಾಗಿದೆ.

**ಸಂಜೆ ೭ ಗಂಟೆಗೆ**

not to be printed

Page 3

**ಅಕ್ಟೋಬರ್ ೯ ಮಂಗಳವಾರ**

photo to be printed here
see cd for the photo with this file no.

**07CC09**

ತಿರುಗಾಟ ನಾಟಕ

## ಲೋಕೋತ್ತಮೆ

ಅರಿಸ್ಟೋಫೆನೀಸ್‌ನ ‘ಲೈಸಿಸ್ಟ್ರಾಟ’ ನಾಟಕಾನುವಾದ

ಅನುವಾದ: ಚನ್ನಕೇಶವ ಮತ್ತು ವಿಶಾಲ

ಸಂಗೀತ ವಿನ್ಯಾಸ: ಚನ್ನಕೇಶವ, ವರುಣ್ ಮತ್ತು ಮಂಜುನಾಥ್

**ನಿರ್ದೇಶನ: ಚನ್ನಕೇಶವ**

ಕ್ರಿ.ಪೂ. ೪೧೧ರಲ್ಲಿ ರಚಿತವಾದ ಲೈಸಿಸ್ಟ್ರಾಟ ಎಂಬ ವೈನೋದಿಕವನ್ನು ಗ್ರೀಕ್ ಮಹಾಕವಿ ಅರಿಸ್ಟೋಫಿನಿಸ್ ಬರೆದಿದ್ದಿರಬಹುದೆಂದು ಪಂಡಿತರ ಅಭಿಮತ. ವೈನೋದಿಕ ನಾಟಕಗಳ ಉತ್ಪ್ರೇಕ್ಷೆಯ ಶೈಲಿಯಲ್ಲಿ, ಇವತ್ತಿಗೂ ಹರಿತವಾಗಿ ಕಾಣುವ ಯುದ್ಧವಿರೋಧಿ-ಜೀವಪರ ನಿಲುವೊಂದನ್ನು ತಳೆಯುವ ಕಾರಣದಿಂದಲೇ ಈ ನಾಟಕವು ಇಂದಿಗೂ ಸಮಕಾಲೀನವಾಗಿ ಉಳಿದಿದೆ.

ಎರಡು ಗ್ರೀಕ್ ರಾಜ್ಯಗಳ ನಡುವೆ ನಡೆಯುವ ಯುದ್ಧವನ್ನು ಆ ಎರಡೂ ರಾಜ್ಯದ ಹೆಂಗಸರು ಕೂಡಿ, ವಿಲಕ್ಷಣವಾದೊಂದು ಉಪಾಯ ದಿಂದ ತಡೆಯುವ ಕಥೆ ಈ ನಾಟಕದಲ್ಲಿದೆ. ಗಂಡಸರು ಯುದ್ಧವನ್ನು ನಿಲ್ಲಿಸಿ ಶಾಂತಿಸ್ಥಾಪನೆ ಮಾಡುವವರೆಗೂ ಮತ್ತು ಆಡಳಿತದಲ್ಲಿ ಸಮಾನತೆಯನ್ನು ಆಚರಿಸುವವರೆಗೂ ತಾವು ಗಂಡನೊಟ್ಟಿಗೆ ಮಲಗಬಾರದೆಂದು ಆ ಎರಡೂ ರಾಜ್ಯಗಳ ಹೆಂಗಸರು ಒಗ್ಗೂಡಿ ಪ್ರತಿಜ್ಞೆ ಮಾಡುವುದು ಈ ನಾಟಕದ ಕೇಂದ್ರಘಟನೆ. ತತ್ಫಲವಾಗಿ, ಶಾಂತಿಗಾಗಿ ಯುದ್ಧ ಹೂಡುವ ಒಬ್ಬ ‘ನಾಯಕಿ’ಯನ್ನು ಎದುರಿಗಿಟ್ಟುಕೊಂಡು ನಡೆಯುವ ಚಿತ್ರವಿಚಿತ್ರ ಘಟನಾವಳಿಗಳ ಮಾಲಿಕೆ ಈ ಕೃತಿಯಲ್ಲಿ ಬಿಚ್ಚಿಕೊಳ್ಳುತ್ತದೆ.

ಪ್ರಸ್ತುತ ಪ್ರಯೋಗವು ಜನಪ್ರಿಯ ಸಂಗೀತ ಮತ್ತು ರಂಗವ್ಯಾಕರಣದಲ್ಲಿ ಈ ಶಾಸ್ತ್ರೀಯ ಪ್ರಹಸನವನ್ನು ಮರುಸೃಷ್ಟಿಸುವ ಪ್ರಯತ್ನಕ್ಕೆ ಕೈಹಾಕಿದೆ.

**ಸಂಜೆ ೭ ಗಂಟೆಗೆ**

not to be printed

Page 4

**ಅಕ್ಟೋಬರ್ ೧೦ ಬುಧವಾರ**

photo to be printed here
see cd for the photo with this file no.

**07CC10a**

ತಾಳಮದ್ದಳೆ

## ಅತಿಕಾಯ ನೀತಿ

ಪ್ರಭಾಕರ ಜೋಶಿ ಮತ್ತು ವಿ. ಉಮಾಕಾಂತ ಭಟ್ಟ

ಅವರಿಂದ

ಯಕ್ಷಗಾನದ ವಾಚಿಕವನ್ನು ಮಾತ್ರ ಬಳಸಿ ಅದರ ಮೂಲಕವೇ ಯಕ್ಷಗಾನ ಮಾಧ್ಯಮದ ವಿಭಿನ್ನ ಅನುಭವವನ್ನು ಕಟ್ಟಿಕೊಡುವ ಕನ್ನಡನಾಡಿನ ಒಂದು ಪ್ರಸಿದ್ಧ ಪ್ರಕಾರ – ತಾಳಮದ್ದಳೆ. ಮಾತೇ ಮಾಧ್ಯಮವಾಗಿರುವ ಈ ಕಥನರಂಗಪ್ರಕಾರವು ಒಂದು ಅರ್ಥದಲ್ಲಿ, ಜನಪ್ರಿಯವಾದ ಒಂದು ತತ್ವಶಾಸ್ತ್ರ ಜಿಜ್ಞಾಸೆಯ ಸಂಪ್ರದಾಯವೂ ಹೌದು – ಪಾತ್ರ ಪಾತ್ರಗಳ ನಡುವೆ ನಾಟಕೀಯವಾಗಿ ನಡೆಯುವ ತಾತ್ವಿಕ ಸಂವಾದವು ಇದರ ಜೀವಾಳ.

‘ಅತಿಕಾಯ ನೀತಿ’ಯೆಂಬ ಪ್ರಸ್ತುತ ಪ್ರಸಂಗವು ತಾಳಮದ್ದಲೆ ಪ್ರಕಾರದ ಇಂಥ ಗುಣವನ್ನು ಬಹು ಚೆನ್ನಾಗಿ ಬಿಂಬಿಸುವ ಒಂದು ಉದಾಹರಣೆ. ಮಹಾಪರಾಕ್ರಮಿಯೂ ಧರ್ಮಿಷ್ಠನೂ ಆದ ರಾವಣನ ಮಗ ಅತಿಕಾಯ, ಕುಂಭಕರ್ಣನ ಮರಣಾನಂತರ ಯುದ್ಧಕ್ಕೆ ಹೋಗುವ ಮೊದಲು ರಾವಣನ ಜೊತೆ ನಡೆಸುವ ತಾತ್ವಿಕ ಸಂವಾದವು ಈ ಕಥಾಭಾಗದ ಕೇಂದ್ರ.

ಇವತ್ತಿನ ತಾಳಮದ್ದಲೆ ಪ್ರಕಾರದ ಇಬ್ಬರು ಪ್ರಮುಖ ಕಲಾವಿದರು ಈ ಪ್ರಸಂಗದಲ್ಲಿ ಅರ್ಥಧಾರಿಗಳು – ಯಕ್ಷಗಾನ ವಿಮರ್ಶೆ-ಸಂಶೋಧನೆ, ಪ್ರವಚನ, ತತ್ವಶಾಸ್ತ್ರ ಮೊದಲಾದ ಕ್ಷೇತ್ರಗಳಲ್ಲಿ ತೊಡಗಿರುವ ಡಾ. ಎಂ. ಪ್ರಭಾಕರ ಜೋಶಿ; ಮತ್ತು, ಮೇಲುಕೋಟೆಯ ಸಂಸ್ಕೃತ ವಿದ್ಯಾಪೀಠದಲ್ಲಿ ನ್ಯಾಯಶಾಸ್ತ್ರದ ಪ್ರಾಧ್ಯಾಪಕರಾಗಿರುವ ವಿ. ಉಮಾಕಾಂತ ಭಟ್. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಇನ್ನಿಬ್ಬರು ಸದಸ್ಯರು – ಪರಮೇಶ್ವರ ಹೆಗಡೆ ಐನಬೈಲು (ಭಾಗವತರು) ಮತ್ತು ನಾಗಭೂಷಣ (ಮದ್ದಳೆ).

**ಸಂಜೆ ೭ ಗಂಟೆಗೆ**

not to be
printed
↓
Page 5

## ಅಕ್ಟೋಬರ್ ೧೦ ಬುಧವಾರ

photo to be printed here
see cd for the photo with this file no.
↓
**07CC10b**

ನಾಟಕ ಪ್ರದರ್ಶನ

# ದಿ ಹೇರ್ ಅಂಡ್ ದಿ ಟಾರ್ಟಾಯ್ಸ್

ಆದಿಶಕ್ತಿ, ಪಾಂಡಿಚೇರಿ ಅವರಿಂದ

ನಿರ್ದೇಶನ: ವೀಣಾಪಾಣಿ ಚಾವ್ಲಾ

ಇವತ್ತಿನ ಭಾರತದಲ್ಲಿ ಕ್ರಿಯಾಶೀಲವಾಗಿರುವ ಪ್ರಮುಖ ರಂಗತಂಡವಾದ ಆದಿಶಕ್ತಿಯು ಪಾಂಡಿಚೇರಿಯ ಆರೋವಿಲ್‌ನಲ್ಲಿ ಒಂದು ರಂಗಸಂಕೀರ್ಣ ವನ್ನು ಕಟ್ಟಿಕೊಂಡು ಸಂಗೀತ, ವೈದ್ಯಕೀಯ, ಪರಿಸರ ಕುರಿತು ಶೋಧನೆ ನಡೆಸುತ್ತಾ ರಂಗಭೂಮಿಯಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಿದೆ. ಈ ತಂಡದ 'ಬೃಹನ್ನಳಾ', 'ಗಣಪತಿ' ಮುಂತಾದ ಪ್ರಯೋಗಗಳು ದೇಶ ವಿದೇಶಗಳಲ್ಲಿ ಪ್ರದರ್ಶನಗೊಂಡಿವೆ. ಈ ತಂಡದ ರೂವಾರಿ ವೀಣಾಪಾಣಿ ಚಾವ್ಲಾ ಇಂಗ್ಲೆಂಡಿನ ರಾಯಲ್ ಶೇಕ್ಸ್‌ಪಿಯರ್ ಕಂಪೆನಿಯಲ್ಲೂ ಕೇರಳದ ಸಾಂಪ್ರದಾಯಿಕ ರಂಗಕಲೆಗಳಲ್ಲೂ ಅಧ್ಯಯನ ನಡೆಸಿದವರು.

ಪ್ರಸ್ತುತ ಪ್ರಯೋಗ – 'ದಿ ಹೇರ್ ಅಂಡ್ ದಿ ಟಾರ್ಟಾಯ್ಸ್', ಶೇಕ್‌ಸ್ಪಿಯರನ ಪ್ರಸಿದ್ಧ ಪಾತ್ರ ಹ್ಯಾಮ್ಲೆಟ್ ಮತ್ತು ಮಹಾಭಾರತದ ಅರ್ಜುನ – ಇವರಿಬ್ಬರ ನಡುವಿನ ಸಾಮ್ಯ-ವ್ಯತ್ಯಾಸಗಳನ್ನು ಪರಿಶೀಲಿಸುತ್ತದೆ. ಮೊಲ ಮತ್ತು ಆಮೆಗಳೆಂಬ ಎರಡು ವ್ಯಕ್ತಿತ್ವಮಾದರಿಗಳ ಮೂಲಕ ಅರ್ಜುನನ ಯಶಸ್ಸು ಮತ್ತು ಹ್ಯಾಮ್ಲೆಟ್‌ನ ವೈಫಲ್ಯಗಳು ಹೇಗೆ ವಿಭಿನ್ನ ರೀತಿಯ ತಿಳುವಳಿಕೆಗಳಿಗೂ ಜ್ಞಾನಕ್ರಮಗಳಿಗೂ ಪ್ರಾತಿನಿಧಿಕವಾಗುತ್ತವೆ ಎಂಬೊಂದು ಹುಡುಕಾಟ ಈ ಪ್ರಯೋಗದ ಹಿಂದಿದೆ.

ಈ ತಂಡದ ಸದಸ್ಯರು – ವಿನಯ್ ಕುಮಾರ್, ಅರವಿಂದ್ ರಾಣೆ, ಸುರೇಶ್ ಕಾಲಿಯಾತ್, ನಿಮ್ಮಿ ರಾಫೆಲ್, ಅರ್ಜುನ್ ಶಂಕರ್, ಜೀನ್ ಲೆಗ್ರಾಂಡ್, ಪಾಸ್ಕಲ್ ಸೀಗರ್ ಮತ್ತು ಎಲ್. ರಜಪ್.

**ಸಂಜೆ ೮.೩೦ ಗಂಟೆಗೆ**

not to be
printed
↓
Page 6

## ಅಕ್ಟೋಬರ್ ೧೧ ಗುರುವಾರ

photo to be printed here
see cd for the photo with this file no.
↓
**07CC11**

ಹಿಂದುಸ್ತಾನಿ ಸಂಗೀತ ಗಾಯನ

# ಪಂ| ಗಣಪತಿ ಭಟ್

ಮತ್ತು ಸಹಕಲಾವಿದರಿಂದ

ಕನ್ನಡ ನಾಡಿನ ಪ್ರಮುಖ ಗಾಯಕರಲ್ಲಿ ಒಬ್ಬರಾದ ಪಂ. ಗಣಪತಿ ಭಟ್ ಹಾಸಣಗಿ ಅವರು ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿಯವರು. ಇವರು ಕಿರಾನಾ, ಗ್ವಾಲಿಯರ್ ಮತ್ತು ಪಟಿಯಾಲಾ ಘರಾನಾಗಳಲ್ಲಿ ಪಂ. ಬಸವರಾಜ ರಾಜಗುರು ಹಾಗೂ ಪಂ. ಸಿ.ಆರ್. ವ್ಯಾಸರವರ ಬಳಿ ಹಿಂದುಸ್ತಾನಿ ಸಂಗೀತಾಭ್ಯಾಸ ಮಾಡಿದರು. ನಂತರ ತಮ್ಮದೇ ಆದ ಕಿರಾನಾ ಮತ್ತು ಗ್ವಾಲಿಯರ್ ಘರಾನಾಗಳ ಮಿಶ್ರ ಶೈಲಿಯಲ್ಲಿ ಹೊಸಮಾರ್ಗ ವೊಂದನ್ನು ಆವಿಷ್ಕರಿಸಿ ರೂಢಿಸಿಕೊಂಡರು. ದೇಶವಿದೇಶಗಳಲ್ಲೆಲ್ಲ ಕಾರ್ಯಕ್ರಮ ಗಳನ್ನು ನೀಡಿರುವ ಇವರು ಸವಾಯಿ ಗಂಧರ್ವ ಉತ್ಸವವೇ ಮೊದಲಾದ ಹಲವು ಪ್ರಮುಖ ಸ್ಥಳಗಳಲ್ಲಿ ಹಾಡಿ ಪ್ರಸಿದ್ಧರಾಗಿದ್ದಾರೆ.

ಪ್ರಸ್ತುತ ಗಣಪತಿ ಭಟ್ ಅವರು ತಮ್ಮ ಊರಿನಲ್ಲಿ ನೆಲೆಸಿ 'ಪಂ. ಗಣಪತಿ ಭಟ್ ಮ್ಯೂಸಿಕ್ ಅಕಾಡೆಮಿ'ಯೆಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಆ ಸಂಸ್ಥೆಯ ಮೂಲಕ ಅವರು ಸಂಗೀತ ಶಾಲೆಯೊಂದನ್ನು ನಡೆಸುತ್ತಿದ್ದಾರೆ, ಪಂ. ರಾಜಗುರು ಅವರ ನೆನಪಿಗೆ ಒಂದು ವಾರ್ಷಿಕ ಸಂಗೀತೋತ್ಸವವನ್ನು ಏರ್ಪಡಿಸುತ್ತಿದ್ದಾರೆ ಹಾಗೂ ಸಂಗೀತಪ್ರಸಾರದ ಹಲವು ಯೋಜನೆಗಳನ್ನೂ ಎತ್ತಿಕೊಂಡಿದ್ದಾರೆ. ಕರ್ನಾಟಕ ಸಂಗೀತ ಅಕಾಡೆಮಿಯ ಪ್ರಶಸ್ತಿಯೂ ಸೇರಿದಂತೆ ಹಲವಾರು ಮನ್ನಣೆ ಮತ್ತು ಗೌರವಗಳು ಇವರಿಗೆ ಸಂದಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ, ಪಂ. ಗಣಪತಿ ಭಟ್ ಅವರೊಂದಿಗೆ ಪಾಲ್ಗೊಳ್ಳುವ ಸಹಕಲಾವಿದರು – ಶ್ರೀ ಶ್ರೀಪಾದ ಹೆಗಡೆ ಸೋಮನಮನೆ (ಹಾರ್ಮೋನಿಯಂ) ಮತ್ತು ಶ್ರೀ ಗೋಪಾಲಕೃಷ್ಣ ಹೆಗಡೆ (ತಬಲಾ).

**ಸಂಜೆ ೭ ಗಂಟೆಗೆ**

not to be printed
Page 7

## ಅಕ್ಟೋಬರ್ ೧೨ ಶುಕ್ರವಾರ

photo to be printed here
see cd for the photo with this file no.

**07CC12**

ಕರ್ನಾಟಕ ಸಂಗೀತ ಗಾಯನ

# ರುದ್ರಪಟ್ಟಣಂ ಸಹೋದರರು

### ಶ್ರೀ ತ್ಯಾಗರಾಜನ್ ಹಾಗೂ ಶ್ರೀ ತಾರಾನಾಥನ್

ಮತ್ತು ಸಹಕಲಾವಿದರಿಂದ

ರುದ್ರಪಟ್ಣಂ ಸಹೋದರರು ಎಂದು ಖ್ಯಾತರಾಗಿರುವ ವಿ। ತ್ಯಾಗರಾಜನ್ ಮತ್ತು ವಿ। ತಾರಾನಾಥನ್ ಅವರು ಕರ್ನಾಟಕ ಸಂಗೀತದ ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ರುದ್ರಪಟ್ಣಂ ಕುಟುಂಬದ ಮೂರನೇ ತಲೆಮಾರಿನವರು. ತಂದೆ ಆರ್.ಕೆ.ನಾರಾಯಣಸ್ವಾಮಿ ಹಾಗೂ ದೊಡ್ಡಪ್ಪ ವೆಂಕಟರಾಮ ಶಾಸ್ತ್ರಿ ಅವರಲ್ಲಿ ಇವರು ತಮ್ಮ ಸಂಗೀತಾಭ್ಯಾಸವನ್ನು ಮಾಡಿದರು. ಕರ್ನಾಟಕ ಸಂಗೀತದ ಆಧುನೀಕರಣಗೊಂಡ ಶೈಲಿಯನ್ನು ಇಷ್ಟಪಡದೇ ಶಾಸ್ತ್ರೀಯ ರೀತಿಯಲ್ಲೇ ಹಾಡುವ ಪ್ರಯೋಗದಲ್ಲಿ ತೊಡಗಿರುವ ಈ ಇಬ್ಬರು ಸಹೋದರರು ಧ್ವನಿ-ಭಾವ-ಸಂಗೀತಪ್ರಸ್ತುತಿಗಳಲ್ಲೂ ಪರಸ್ಪರ ಅಸಾಧಾರಣ ಹೊಂದಾಣಿಕೆಯನ್ನು ಸಾಧಿಸಿಕೊಂಡಿದ್ದಾರೆ. ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಮಾತ್ರವಲ್ಲದೇ ನಮ್ಮ ದೇಶದಾದ್ಯಂತ ಹಾಗೂ ಅಮೇರಿಕಾ, ಸಿಂಗಾಪುರ, ಕೌಲಾಲಂಪುರ ಸೇರಿದಂತೆ ವಿದೇಶಗಳಲ್ಲೂ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕರ್ನಾಟಕ ಸಂಗೀತಕ್ಕೆ ಸಂಬಂಧಿಸಿ ಹಲವಾರು ಧ್ವನಿಮುದ್ರಿಕೆಗಳನ್ನು ಕೂಡ ಇವರು ಹೊರತಂದಿದ್ದಾರೆ.

ಸಣ್ಣವಯಸ್ಸಿನಲ್ಲಿಯೇ ಆಕಾಶವಾಣಿಯ ಹಲವು ಪ್ರಶಸ್ತಿಗಳನ್ನು ಪಡೆದಿರುವ ಇವರು ಮದರಾಸಿನ ಮ್ಯೂಸಿಕ್ ಅಕಾಡೆಮಿಯಿಂದ ಉತ್ತಮ ಕಾರ್ಯಕ್ರಮ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಉಡುಪಿಯಲ್ಲಿ ಗಾನಸುಧಾಕರ ಹಾಗೂ ಗೋವಾದಲ್ಲಿ ಗಾನಕಲಾತಿಲಕ ಬಿರುದುಗಳು, ಮುಸುರಿ ಸುಬ್ರಹ್ಮಣ್ಯ ಐಯ್ಯರ್ ನೆನಪಿನ ಪ್ರಶಸ್ತಿ ಮೊದಲಾಗಿ ಹಲವಾರು ಮನ್ನಣೆಗಳನ್ನು ಪಡೆದಿದ್ದಾರೆ.

**ಸಂಜೆ ೭ ಗಂಟೆಗೆ**

not to be printed
Page 8

## ಅಕ್ಟೋಬರ್ ೧೩ ಶನಿವಾರ

photo to be printed here
see cd for the photo with this file no.

**07CC13**

ಭರತನಾಟ್ಯ - ಕಥಕ್ ನೃತ್ಯ ಪ್ರದರ್ಶನ

# ನಿರುಪಮಾ-ರಾಜೇಂದ್ರ

ಅವರಿಂದ

ಕರ್ನಾಟಕದಲ್ಲಿ ಭರತನಾಟ್ಯ ಮತ್ತು ಕಥಕ್ ಶೈಲಿಯ ನೃತ್ಯಪ್ರಕಾರಗಳಲ್ಲಿ ಪ್ರಮುಖರಾಗಿರುವ ಜೋಡಿ – ಶ್ರೀ ರಾಜೇಂದ್ರ ಮತ್ತು ಶ್ರೀಮತಿ ನಿರುಪಮಾ ಅವರದು. ಪ್ರಭಾತ ಕಲಾವಿದರು ನಾಟಕ ತಂಡದ ನೃತ್ಯ ನಾಟಕಗಳಲ್ಲಿ ಅಭಿನಯಿಸುವ ಮೂಲಕ ರಾಜೇಂದ್ರ ಅವರು ತಮ್ಮ ನಾಲ್ಕನೇ ವಯಸ್ಸಿನಲ್ಲಿಯೇ ಕಲಾತ್ಮಕ ಬದುಕಿಗೆ ಕಾಲಿಟ್ಟರು. ಅನಂತರ ಐದು ವರ್ಷ ಭರತನಾಟ್ಯವನ್ನು ಬೆಂಗಳೂರಿನ ಪ್ರೊ। ಯು.ಎಸ್.ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ ಅವರಲ್ಲಿ ಕಲಿತರು. ನಿರುಪಮಾರವರು ಹದಿಮೂರು ವರ್ಷಗಳ ಕಾಲ ಶಾಸ್ತ್ರಬದ್ಧವಾಗಿ ಭರತನಾಟ್ಯವನ್ನು ಬೆಂಗಳೂರಿನ ಕಲಾಮಂಡಲಂ ರಾಧಿಕಾ ಮತ್ತು ನರ್ಮದಾ ಅವರಲ್ಲಿ ಕಲಿತರು. ನಂತರ ಇಬ್ಬರೂ ಕಥಕ್ ನೃತ್ಯವನ್ನು ಅಹಮದಾಬಾದಿನ ಪದ್ಮಶ್ರೀ ಕುಮುದಿನಿ ಲಾಖಿಯಾ ಮತ್ತು ಬೆಂಗಳೂರಿನ ಡಾ. ಮಾಯಾ ರಾವ್ ಅವರಲ್ಲಿ ಕಲಿತರು. ಇವಲ್ಲದೇ ಇಬ್ಬರೂ ಮಣಿಪುರಿ ಸಮರ ಕಲೆ, ಜನಪದ ನೃತ್ಯ ಮುಂತಾದವುಗಳನ್ನು ಕಲಿತಿದ್ದಾರೆ.

ರಾಜೇಂದ್ರರು 'ನಾಟ್ಯ ಪ್ರವೀಣ' ಮತ್ತು ನಿರುಪಮಾರವರು 'ನಾಟ್ಯ ಮಯೂರಿ' ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಇವಲ್ಲದೇ ಈ ಜೋಡಿಯು ಮಿಚಿಗನ್‌ನ ವೇಯ್ನ್ ಸ್ಟೇಟ್ ಯುನಿವರ್ಸಿಟಿಯಿಂದ; ಒಕ್ಲಹಾಮಾದ ಗೌರ್ನರ್‌ರಿಂದ ಗೌರವ ಪ್ರಶಸ್ತಿಗಳನ್ನು ಪಡೆದಿದ್ದಲ್ಲದೇ ಹಲವಾರು ದೇಶೀ ಹಾಗೂ ವಿದೇಶೀ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕರ್ನಾಟಕದ ಹಲವೆಡೆ, ಭಾರತ ಮತ್ತು ಹೊರದೇಶಗಳ ಅನೇಕ ಪ್ರತಿಷ್ಠಿತ ಉತ್ಸವಗಳಲ್ಲಿ ಇವರು ಕಾರ್ಯಕ್ರಮಗಳನ್ನು ನೀಡಿ ಜನಪ್ರಿಯರಾಗಿದ್ದಾರೆ.

**ಸಂಜೆ ೭ ಗಂಟೆಗೆ**

Renovation
folder page 2

## ಶಿವರಾಮ ಕಾರಂತ ರಂಗಮಂದಿರ
## ನವೀಕರಣ ಯೋಜನೆ

ಶಿವರಾಮಕಾರಂತ ರಂಗಮಂದಿರವು ನೀನಾಸಮ್‌ನ ಶಾಖೋಪಶಾಖೆಗಳಿಗೆ ಕೇವಲ 'ರಂಗಮಂದಿರ' ಮಾತ್ರವಲ್ಲ; ತರಬೇತಿಶಾಲೆ, ಬೋಧನಾ ಕೊಠಡಿ, ರಂಗವಸ್ತುಗಳ ನಿರ್ಮಾಣಸ್ಥಳ, ಸಭಾಗೃಹ, ಚಿತ್ರಮಂದಿರ, ಕಛೇರಿ, ಸಮಾವೇಶದ ತಾಣ – ಎಲ್ಲವೂ ಹೌದು. ನೀನಾಸಮ್‌ನ ಎಲ್ಲ ರಂಗಕೃತಿಗಳಿಗೆ ಅದು ಟಂಕಸಾಲೆ; ನೀನಾಸಮ್ ರಂಗಶಿಕ್ಷಣಕ್ಕೆ ಈ ರಂಗಮಂದಿರವೇ ಪ್ರಯೋಗಶಾಲೆ; ಮತ್ತು, ವಿಶಾಲ ಅರ್ಥದಲ್ಲಿ ಇದು ನೀನಾಸಮ್ ಸಂಸ್ಥೆಯ ಎಲ್ಲ ಬಗೆಯ ಮಾತುಕತೆಗಳಿಗೂ ಸಂವಾದ-ಸಂವಹನೆಗಳಿಗೂ ಒದಗಿಬಂದ ಒಂದು 'ಅನುಭವ ಮಂಟಪ'.

೧೯೭೨ರಲ್ಲಿ ಒಂದು ಲಕ್ಷ ರೂಪಾಯಿಗಿಂತಲೂ ಕಡಿಮೆ ಖರ್ಚಿನಲ್ಲಿ ನಿರ್ಮಿತವಾಗಿದ್ದ ಈ ಕಟ್ಟಡವು ಅಂದಿನಿಂದ ಇಂದಿನವರೆಗೆ ಸತತವಾಗಿ ಉಪಯೋಗವಾಗುತ್ತ ಬಂದಿದೆ – ನೀನಾಸಮ್‌ನ ಹಲವು ಪ್ರಮುಖ ಚಟುವಟಿಕೆಗಳಿಗೆ ಇದು ಕೇಂದ್ರವಾಗಿದೆ; ನೀನಾಸಮ್‌ನ ಪ್ರಯೋಗಗಳು ಈ ರಂಗಮಂದಿರದ ಮೂಲೆಮೂಲೆಗಳನ್ನು ನಾನಾ ರೀತಿಯಲ್ಲಿ ಬಳಸಿಕೊಂಡು ಮೈದಾಳಿವೆ. ಭಾರತದ ಮತ್ತು ಹೊರದೇಶಗಳ ಹಲವು ಗಣ್ಯ ಕಲಾವಿದರು ಇಲ್ಲಿ ಆಡಿದ್ದಾರೆ, ಹಾಡಿದ್ದಾರೆ; ಚಿಂತಕರು ಇಲ್ಲಿ ಮಾತಾಡಿದ್ದಾರೆ; ವಿಶ್ವದ ಶ್ರೇಷ್ಠ ಚಿತ್ರಗಳಿಲ್ಲಿ ಪ್ರದರ್ಶನಗೊಂಡಿವೆ; ಸ್ಥಳೀಯ ಸಂಸ್ಥೆಗಳ ಹಲವು ಕಾರ್ಯಕ್ರಮಗಳಿಗೂ ಇಲ್ಲಿ ಸ್ಥಳ ದೊರಕಿದೆ.

೧೯೭೨ರಿಂದ ಇಂದಿನವರೆಗೆ, ಒಮ್ಮೆ ನೇಪಥ್ಯದ ಕೊಠಡಿಗಳನ್ನು ಸೇರಿಸಿದ್ದು ಮತ್ತು ಹಲವೊಮ್ಮೆ ಸಣ್ಣಪುಟ್ಟ ದುರಸ್ತಿಗಳನ್ನು ಮಾಡಿಸಿದ್ದು ಬಿಟ್ಟರೆ, ಈ ರಂಗಮಂದಿರವನ್ನು ಇದುವರೆಗೂ ಪೂರ್ಣ ಪ್ರಮಾಣದ ನವೀಕರಣಕ್ಕೆ ಒಳಪಡಿಸಿದ್ದಿಲ್ಲ. ಈ ಹಿನ್ನೆಲೆಯಲ್ಲಿ ಈಗ, ಅಂದರೆ ೨೦೦೬ ನವೆಂಬರಿನಿಂದ ೨೦೦೭ ಸೆಪ್ಟೆಂಬರ್‌ವರೆಗೆ, ಈ ಕಟ್ಟಡವನ್ನು ಇಡಿಯಾಗಿ ಬಿಚ್ಚಿ ಅಗತ್ಯವಾಗಿದ್ದ ಬಹುತೇಕ ಪರಿಷ್ಕರಣೆಗಳನ್ನು ಮಾಡುವ ವ್ಯಾಪಕ ಯೋಜನೆಯನ್ನು ಹಾಕಿಕೊಂಡು ಪೂರೈಸಲಾಗಿದೆ.

ಮುಖ್ಯವಾಗಿ – ಈ ಕಟ್ಟಡದ ಹಿಂಬದಿಯ ಖಾಲಿ ಸ್ಥಳವನ್ನು ಬಳಸಿ ನಿರ್ಮಿತಿ ಕಾರ್ಯಾಗಾರವನ್ನೀಗ ಕಟ್ಟಲಾಗಿದೆ; ಹಲವು ಕಡೆಗಳಲ್ಲಿ ದಾಸ್ತಾನು ಸ್ಥಳಗಳನ್ನು ರೂಪಿಸಲಾಗಿದೆ; ಪ್ರೇಕ್ಷಾಂಗಣಕ್ಕೆ ಈಗೊಂದು ಮಹಡಿ ಬಂದಿದೆ; ರಂಗಮಂದಿರದ ಎರಡೂ ಬದಿಗಳ ಕಟ್ಟೆಯನ್ನು ವಿಸ್ತರಿಸಿ ಅದಕ್ಕೊಂದು ಹೊಸ ಆವರಣವನ್ನು ನಿರ್ಮಿಸಲಾಗಿದೆ. ಇಷ್ಟೇ ಅಲ್ಲದೆ, ಶಿಥಿಲಗೊಂಡಿದ್ದ ನೆಲ–ಕಿಟಕಿ–ಬಾಗಿಲು ಸೇರಿ ಎಲ್ಲ ಭಾಗಗಳನ್ನು ಈಗ ದುರಸ್ತಿ ಮಾಡಲಾಗಿದೆ; ರಂಗಪ್ರಕಾಶವನ್ನು ವಿನ್ಯಾಸಗೊಳಿಸಲು ಅನುಕೂಲವಾಗುವಂತೆ ಕ್ಯಾಟ್‌ವಾಕ್‌ನಂಥ ಹೊಸ ವ್ಯವಸ್ಥೆಗಳನ್ನು ಸೇರಿಸಲಾಗಿದೆ; ಮತ್ತು ಇಡಿಯ ಕಟ್ಟಡಕ್ಕೆ ಪೂರ್ಣವಾಗಿ ಸುಣ್ಣಬಣ್ಣ ಕೂಡ ಮಾಡಲಾಗಿದೆ. ಇಷ್ಟೆಲ್ಲ ಮಾಡಿಯೂ ಈ ರಂಗಮಂದಿರದ ಹಳೆಯ ರೂಪವು ಮಸುಕಾಗದ ಹಾಗೆ ಎಚ್ಚರಿಕೆ ವಹಿಸಲಾಗಿದೆ; ಮತ್ತು ನೀನಾಸಮ್‌ನ ನಂಬಿಕೆಗೆ ಅನುಗುಣವಾಗಿ ಈ ಮರುನಿರ್ಮಾಣವು ಮಿತವ್ಯಯದಲ್ಲಿ ನಡೆಯುವಂತೆ ಕೂಡ ನೋಡಿಕೊಳ್ಳಲಾಗಿದೆ.

Renovation
folder page 3

## ನವೀಕರಣಕ್ಕೆ ಒದಗಿದ ಸಹಾಯ-ಸಹಕಾರಕ್ಕೆ
## ಪ್ರೀತಿಯ ಕೃತಜ್ಞತೆ

೨೦೦೫ರ ಕಡೆಯ ಭಾಗದಲ್ಲಿಯೇ ಈ ನವೀಕರಣದ ವಿವರವಾದ ಯೋಜನೆಯೊಂದನ್ನು ರೂಪಿಸಿಕೊಳ್ಳಲು ಆರಂಭಿಸಿದ ನೀನಾಸಮ್ ಹಲವು ಪರಿಷ್ಕಾರಗಳ ಬಳಿಕ ಆ ಕೆಲಸವನ್ನೀಗ ಮಾಡಿಮುಗಿಸಿದೆ. ಮೊದಲಿಗೆ ಸುಮಾರು ೩೫ ಲಕ್ಷರೂಪಾಯಿಗಳಷ್ಟು ವೆಚ್ಚವಾಗಬಹುದು ಎಂದು ಅಂದಾಜು ಮಾಡಿದ್ದ ಈ ಯೋಜನೆಯು, ಮುಗಿಯುವಾಗ ಹತ್ತಿರ ಹತ್ತಿರ ೪೫ ಲಕ್ಷಕ್ಕೆ ಮುಟ್ಟಿದೆ. ಆದರೆ, ಆರಂಭದಲ್ಲಿ ಯೋಜಿಸಿಕೊಂಡಿದ್ದಕ್ಕಿಂತ ಒಂದೂವರೆ ಪಟ್ಟಿನಷ್ಟು ಹೊಸ ಕೆಲಸಗಳು ಇದಕ್ಕೆ ಕೂಡಿವೆ; ನಿರ್ಮಾಣ ಸಾಮಗ್ರಿಗಳ ಬೆಲೆಯೇರಿಕೆಯ ಜೊತೆಗೆ ತೀರ ಅಗತ್ಯವಾಗಿದ್ದ ೪೦ ಕಿ.ವಾ. ಶಕ್ತಿಯ ಹೊಸ ವಿದ್ಯುಜ್ಜನಕದಂಥ ಉಪಕರಣಗಳನ್ನು ಕೊಂಡಿದ್ದೂ ಈ ಖರ್ಚಿನ ಏರಿಕೆಗೆ ಕಾರಣವಾಗಿದೆ.

ಸರ್ಕಾರ, ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಹಾಗೂ ವೈಯಕ್ತಿಕ ದಾನಿಗಳು ಕೂಡಿ ಈ ಕೆಲಸಕ್ಕೆ ಬೇಕಾಗುವ ಧನಸಹಾಯವನ್ನು ನಮಗೆ ತುಂಬ ಪ್ರೀತಿಯಿಂದ ಒದಗಿಸಿಕೊಟ್ಟಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯ ವಿಶೇಷ ಅನುದಾನ, ಡಾ. ವಿಜಯ ಮಲ್ಯ ಅವರ ಲೋಕಸಭಾ ಸದಸ್ಯರ ನಿಧಿ, ಡಾ. ಚಂದ್ರಶೇಖರ ಕಂಬಾರರ ವಿಧಾನ ಪರಿಷತ್ ಸದಸ್ಯರ ನಿಧಿ – ಇವು ಸರ್ಕಾರದಿಂದ ದೊರೆತ ಧನಸಹಾಯ. ಇದಲ್ಲದೆ, ಶ್ರೀ ಮೋಹನ ದಾಸ ಪೈ, ಶ್ರೀ ಆನಂದ ತಳವಾಯಿ ಮತ್ತು ಶ್ರೀಮತಿ ಆಶಾ ತಳವಾಯಿ, ಶ್ರೀ ಶಂಕರ ಪಾಠಕ್ ಮೊದಲಾದ ವ್ಯಕ್ತಿಗಳೂ ಹಾಗೂ ಬಿ.ಇ.ಎಂ.ಎಲ್., ಕರ್ನಾಟಕ ಬ್ಯಾಂಕ್, ಆರ್.ಎನ್.ಎಸ್. ಗ್ರೂಪ್ ಮೊದಲಾದ ಉದ್ಯಮ ಸಂಸ್ಥೆಗಳವರೂ ನಮಗೆ ಹಣ ಅಥವಾ ವಸ್ತುರೂಪದಲ್ಲಿ ವಿಶೇಷ ಸಹಾಯ ಮಾಡಿದ್ದಾರೆ.

ಈ ಸಹಾಯವನ್ನು ಕೊಡಿಸಿಕೊಡುವಲ್ಲಿ ಸರ್ಕಾರದ ಅಧಿಕಾರಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ, ಶ್ರೀ ಟಿ.ಕೆ. ಅನಿಲಕುಮಾರ್, ಶ್ರೀ ಶ್ರೀರಂಗಯ್ಯ – ಇವರ ಆದಿಯಾಗಿ ಈ ಎಲ್ಲ ಇಲಾಖೆಗಳ ಸಿಬ್ಬಂದಿವರ್ಗದವರೂ ನಮಗೆ ವಿಶೇಷ ನೆರವು ನೀಡಿದ್ದಾರೆ. ಧನಸಂಗ್ರಹಕಾರ್ಯದಲ್ಲಿ ನಮ್ಮ ಸಂಸ್ಥೆಯ ಹಿತೈಷಿಗಳಾದ ಶ್ರೀ ಪ್ರಕಾಶ ಬೆಳವಾಡಿ, ಶ್ರೀ ಜಿ.ಕೆ. ಗೋವಿಂದರಾವ್, ಶ್ರೀ ಅಶೋಕ ಹೆಗಡೆ, ಶ್ರೀ ವಿವೇಕ ಶಾನಭಾಗ, ಶ್ರೀ ಗಜಾನನ ಶರ್ಮ, ಶ್ರೀ ಚಂದ್ರಶೇಖರ್, ಶ್ರೀ ಗಣೇಶಪ್ರಸಾದ್ – ಮೊದಲಾದವರು ತುಂಬ ಸಹಾಯ ಮಾಡಿದ್ದಾರೆ.

ವಾಸ್ತುಶಿಲ್ಪಿಗಳಾದ ಶ್ರೀ ಕೆ.ಜಿ. ಶ್ರೀಧರ ಮತ್ತು ಶ್ರೀ ಜಿ.ಎಸ್. ತಿಮ್ಮಪ್ಪನವರ ಮಾರ್ಗದರ್ಶನದಲ್ಲಿ ಸುಮಾರು ಒಂದು ನೂರು ಜನ ಯೋಜಕರು, ತಂತ್ರಜ್ಞರು, ನಿರ್ಮಾಣಕಾರರು ಈ ಯೋಜನೆಯಲ್ಲಿ ಪಾಲ್ಗೊಂಡಿದ್ದಾರೆ; ಆಸ್ಥೆ ವಹಿಸಿ ಈ ಕೆಲಸವು ಸಮರ್ಪಕವಾಗಿಯೂ ಮತ್ತು ಸಕಾಲಕ್ಕೆ ಮುಗಿಯುವಂತೆಯೂ ಸಹಾಯ ಮಾಡಿದ್ದಾರೆ.

– ಇವರೆಲ್ಲರಿಗೂ ನಮ್ಮ ಪ್ರೀತಿಯ ಕೃತಜ್ಞತೆಗಳನ್ನು ಹೇಳುತ್ತಲೇ ನಾವೀಗ ಮುಂದಿನ ಹೊಸ ಕಾಲದ ಹೊಸ ಪ್ರಯೋಗಗಳಿಗಾಗಿ ಈ ನವೀಕೃತ ರಂಗಮಂದಿರವನ್ನು ತೆರೆಯುತ್ತಿದ್ದೇವೆ, ನಿಮಗೆ ಸ್ವಾಗತ.